ಶ್ರೀ ಕೆ. ರಾಮಭಟ್.—ಮಾನ್ಯ ಮಂತ್ರಿಗಳು ತನಿಖೆ ಸರಿಯಾಗಿ ನಡೆದಿಲ್ಲವೆಂದು ಹೇಳಿದರೆ ಪುನಃ ಸರಿಯಾದ ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ ಆದ್ದರಿಂದ ತನಿಖೆ ಸರಿಯಾಗಿ ನಡೆದಿಲ್ಲದಿರುವುದರಿಂದ ಮತ್ತೊಮ್ಮೆ ಸರಿಯಾಗಿ ತನಿಖೆ ನಡೆಸಬೇಕೆಂದು ಹೇಳಿಕತ್ತೇನೆ.

ಶ್ರೀ ಎ.ಜಿ. ಕೊಡಗಿ.—ತನಿಖೆಯ ವರದಿ ಯಾವಾಗ ಬಂದಿದೆ. ಕಾರ್ಯದರ್ಶಿಯವರನ್ನು ಅಲ್ಲೇ ಇಟ್ಟುಕೊಂಡು ತನಿಖೆ ನಡೆಸಿದರೆ ಏನು ಪ್ರಯೋಜನ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಹಕಾರ ಸಂಘದ ರಿಜಿಸ್ಟ್ರಾರ್‌ರವರು ಅವರ ಅಧಿಕಾರಿಗಳಿಂದ ಕಾನೂನಿನ ಪ್ರಕಾರ ಆದರೆ ತನಿಖೆ ಮಾಡಿಸಿದ್ದಾರೆ ತನಿಖೆಯ ವರದಿ ಯಾವಾಗ ಬಂತು ಎಂಬ ಬಗ್ಗೆ ನನ್ನ ಹತ್ತಿರ ಸದ್ಯದಲ್ಲಿ ವಿವರಗಳು ಇಲ್ಲ.

ಶ್ರೀ ಎ.ಜಿ. ಕೊಡಗಿ.—೨ ವರ್ಷಗಳ ಹಿಂದೆ ವರದಿ ಬಂದಿದ್ದು ತನಿಖೆ ಇತ್ತೀಚೆಗೆ ನಡೆದದ್ದು ಸರಿಯಲ್ಲ. ಹೊಣೆಯನ್ನು ಕಾರ್ಯದರ್ಶಿಯವರ ಮೇಲೆ ಹೊರಿಸಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾರ್ಯದರ್ಶಿಯವರಿಗೆ ನೋಟೀಸ್ ಕೊಟ್ಟಿದ್ದು ೫-೪-೮೦ಕ್ಕೆ ವಿಚಾರಣೆ ನಡೆದಿರುವುದು ೫-೧೨-೭೯ರಲ್ಲಿ ಆದ್ದರಿಂದ ಹೆಚ್ಚು ತಡವೇನೂ ಆಗಿಲ್ಲ.

Irrigation of lands in Shimoga District by digging 30 bore-wells

639. S. M. SHEERANALY CHANDRASHEKAR (Hosanagar).—Will the Minister for Transport and Minor Irrigation be pleased to state.—

(*a*) Whether there is a proposal before the Government to irrigate the lands in Kumsi and Harnahalli hoblies of Shimoga by digging 30 bore-wells in each hobli ;

(*b*) if so, on what date the work will be taken up and completed?

SRI M.M.J. SADYOJATHA (Minister for Transport and Minor Irrigation).—

(*a*) No.

(*b*) Does not arise.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸ್ವಾಮಿ ನಿನ್ನೆ ಬಾಂಬ್ ನನ್ನ ಮೇಲೆ ಬಿದ್ದಿದೆ. ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಉತ್ತರಕೊಡುವಾಗ Administrative sanction ತೆಗೆದುಕೊಂಡಿದೆ ಆದನ್ನು ಕಾರ್ಯಗತ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದರು. ಆದರೆ ಈಗ ನಮಗೆ ಬೇಕಾದ ಮಂತ್ರಿಗಳು ಬಂದಿದ್ದಾರೆ, ಇದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡಲಿ ಎಂದು ಪುನಃ ಅದೇ ಪ್ರಶ್ನೆಯನ್ನು ಕೇಳಿದೆ, ಆದರೆ ಇವರು ವಿರುದ್ಧವಾದ ಉತ್ತರ ಕೊಟ್ಟಿದ್ದಾರೆ, ಇದು ಏನು ಸ್ವಾಮಿ?

SRI. M.M.J. SADYOJATHA.—I will get the entire scheme re-examined.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಕೇಳಿದ್ದು re-examine ಮಾಡಿಸಬೇಕೆಂದಲ್ಲ ಹಿಂದೆ ತಮ್ಮ ಇಲಾಖೆಯನ್ನು ಹೊಂದಿದ್ದಂತಹ ಮಂತ್ರಿಗಳು ಕೆಲಸವನ್ನು ಪ್ರಾರಂಭಮಾಡಿ ಸುತ್ತೇನೆಂದು ಹೇಳಿದ್ದರು. ಆದರೆ ನಾನು ಈ ಪ್ರಶ್ನೆಯನ್ನು ಹಾಕಿದ್ದು ಕೆಲಸ ಜರೂರಾಗಿ ನಡೆಯಲಿ ಎಂದು ಜೊತೆಗೆ ನಮ್ಮ ಸ್ನೇಹಿತರೇ ಆದ ಸದ್ಯೋಜಾತಪ್ಪನವರು ಈ ಇಲಾಖೆಯನ್ನು ಹೊಂದಿದ್ದಾರೆ ಬೇಗ ಕೆಲಸಮಾಡಿಸಲಿ ಎಂದು.

ಶ್ರೀ ಎಂ.ಎಂ. ಜೆ. ಸದ್ಯೋಜಾತ.—ಪುನಃ ಫೈಲ್ ತರಿಸಿ ನೋಡಿ ಆದಷ್ಟು ಬೇಗ ಮಾಡಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಶೀನ್ಯಾಳಿ ಚಂದ್ರಶೇಖರ್.—ಆದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ?

ಶ್ರೀ ಎಂ.ಎಂ. ಜೆ. ಸದ್ಯೋಜಾತ.—ಅದನ್ನು ನಿರ್ದಿಷ್ಟವಾಗಿ ಹೇಳಲಿಕ್ಕೆ ಬರುವುದಿಲ್ಲ.

Thermal Plant at Mangalore

654 SRI B.A. Mohideen (Bantwal).—Will the Chief Minister be pleased to state.—

Whether there is a proposal before the Government to set up a thermal plant at Mangalore ?

SRI S. BANGARAPPA (Minister of Revenue and Agriculture).— on behalf of SRI R. GUNDU RAO (Chief Minister).— There is no proposal at present to set up a thermal plant at Mangalore.

ಶ್ರೀ ಬಿ.ಎ. ಮೊಹಿದ್ದೀನ್.—(ಭಂಟವಾಳ) ಮಂಗಳೂರಿನಲ್ಲಿ Termal plant ಸ್ಥಾಪಿಸುವುದು ಅವಶ್ಯಕ ಎಂಬ ಅಭಿಪ್ರಾಯ ಸರ್ಕಾರಕ್ಕಿಲ್ಲವೇ?

ಶ್ರೀ ಎಸ್. ಬಂಗಾರಪ್ಪ.—ಮಂಗಳೂರಿನಲ್ಲಿ ಥರ್ಮಲ್ ಪ್ಲಾಂಟ್ ಸ್ಥಾಪಿಸುವುದು ಅವಶ್ಯಕವೆ ಅಥವಾ ಇಲ್ಲವೇ ಎನ್ನುವ ಅಭಿಪ್ರಾಯವನ್ನು ಕೊಡಲಿಕ್ಕೆ ನಾನುಈಗ ಸಿದ್ದನಿಲ್ಲ. ಆದರೆ ಥರ್ಮಲ್ ಪ್ಲಾಂಟ್ ಬಗ್ಗೆ ೨ನೇ ಸ್ಟೇಜ್ ಆಗಬೇಕು. ನಮ್ಮ ಇಲಾಖೆಯ ತಾಂತ್ರಿಕ ಅಧಿಕಾರಿಗಳ ಅಭಿಪ್ರಾಯದ ಪ್ರಕಾರ ೧೯೯೫ರ ಸುಮಾರಿಗೆ ಮತ್ತೊಂದು ಥರ್ಮಲ್ ಪ್ಲಾಂಟ್ ಹಾಕಬೇಕಾಗುತ್ತದೆ ಎನ್ನುವ ಅಭಿಪ್ರಾಯವಿದೆ. ಅದನ್ನು ಮಂಗಳೂರು, ರಾಯಚೂರು ಅಥವಾ ಮೈಸೂರು ಎಲ್ಲಿ ಮಾಡಬೇಕು ಎಂಬುದನ್ನು ಸ್ಪೆಸಿಫಿಕ್ ಆಗಿ ಈಗಲೇ ಹೇಳಲಿಕ್ಕೆ ಬರುವುದಿಲ್ಲ. ಅದಕ್ಕೆ ಬೇಕಾಗುವ ಕೋಲ್ ಟ್ರಾನ್ಸ್ಪೋರ್ಟ್ ಮುಂತಾದ ಸೌಲಭ್ಯಗಳು ಎಲ್ಲಿ ಸಿಗುತ್ತವೆಂಬುದನ್ನು ನೋಡಿ ಎರಡನೇ ಫವರ್ ಪ್ಲಾಂಟ್ ಯೋಜನೆಯನ್ನು ಮಾಡಬಹುದು ಎಂದು ನಮ್ಮ ತಾಂತ್ರಿಕ ತಜ್ಞರುಅಭಿಪ್ರಾಯ ಇಟ್ಟುಕೊಂಡಿದ್ದಾರೆ.

ಶ್ರೀ ಎ.ಜಿ. ಕೊಡಗಿ.—ಮಂಗಳೂರಿನಲ್ಲಿ ಯಾರಾದರೂ ಮಂತ್ರಿಗಳು ಬಂದರೆ ಇದರ ಬಗ್ಗೆ ತಾವು ಗಟ್ಟಿಲೆ ಭಾಷಣ ಕೊಡುತ್ತಾರೆ. ಥರ್ಮಲ್ ಪ್ಲಾಂಟ್ ಅವಶ್ಯಕತೆ ಇದೆ ಎಂದು ಮಂತ್ರಿಗಳು ಭಾಷಣ ಮಾಡುವಾಗ ಹೇಳುತ್ತಾರೆ ಜೊತೆಗೆ ಹಣಕಾಸಿನ ಮುಗ್ಗಟ್ಟು ಇರುವುದರಿಂದ ಮುಂದೆ ಮಾಡಬೇಕಾಗುತ್ತದೆ ಎಂದೂ ಹೇಳುತ್ತಾರೆ. ಆದರೆ ಇಲ್ಲಿ ಮಂತ್ರಿಗಳು ಉತ್ತರ ಕೊಟ್ಟಿರುವುದನ್ನು ನೋಡಿದರೆ ಅನುಮಾನ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ಕೇಳಂತ್ತಿದ್ದೇನೆ. ಇದಕ್ಕೆ ಉತ್ತರ ಕೊಡ ತಕ್ಕಂಥಾದ್ದು ಅವಶ್ಯಕ?

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಉತ್ತರಕೊಡತಕ್ಕಂಥಾದ್ದು ಸುಲಭ ಮಂತ್ರಿಗಳು ಅವರ ಅಭಿಪ್ರಾಯವನ್ನು ಅಲ್ಲಿ ಹೇಳಿದ್ದಾರೆ, ನಾವು ಕೂಡ ಅದನ್ನು ಇಲ್ಲವೆಂದು ಹೇಳಲಿಲ್ಲ. ಕೆಲವು ಸಂಬಂಧಪಟ್ಟ ಜಿಲ್ಲೆಯ ಮಂತ್ರಿಗಳು ಒಬ್ಬರು ಹಾಗೆ ಅಭಿಪ್ರಾಯಪಡಬಹುದು. ಮತ್ತೊಂದು ಥರ್ಮಲ್ ಪ್ಲಾಂಟ್ ಮಾಡುವಾಗ ಎಲ್ಲಿ ಮಾಡಬೇಕೆಂದು ಯೋಚನೆ ಮಾಡೋಣ ನಾನು ಕೂಡ ಮಂಗಳೂರಿನಲ್ಲಿ ಥರ್ಮಲ್ ಪ್ಲಾಂಟ್ ಮಾಡಂವುದೇ ಇಲ್ಲವೆಂದು ಹೇಳುವುದಿಲ್ಲ. ಸರ್ಕಾರದ ಅಭಿಪ್ರಾಯದಲ್ಲಿ ಮಂಗಳೂರು ಇದ್ದೇ ಇರುತ್ತದೆ.

ಶ್ರೀ ಕೆ. ರಾಮಭಟ್. - ತಾಪಸ್ಥಾವರವನ್ನು ಸ್ಥಾಪಿಸುವ ಬಗ್ಗೆ ಮಂಗಳೂರು ಯೋಗ್ಯ ಸ್ಥಳ ಹೌದೇ ಅಲ್ಲವೇ? ಇದು ಯೋಗ್ಯ ಸ್ಥಳ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ?